ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Saturday, 17th June 1978. / Jyeista 27 1900 S. E.

The House met in the Assembly Chamber Vidhana Soudha at Nine of the Clock.

[MR. SPEAKER (SRI P. VENKATARAMANA) in the Chair]

STARRED QUESTIONS

(to which oral answers were given

Arkalgud Taluk under REC Scheme

145 SRI K. B. MALLAPPA (Arakalgud). Will the Chief Minister be pleased to state:—

(*a*) whether Arkalgud taluk has been included under the REC scheme;

(*b*) if so, the number of villages electrified so far and the number of applications received for power supply;

(*c*) the number of villages in Arkalgud taluk where poles have been erected but wires have not been drawn;

(*d*) when will these villages be electrified?

Sri. K. H. Srinivas (Minister of State for Information and Youth [Services [on behalf of SRI D. DEVARAJ URS (Chief Minister)]

(*a*) No

(*b*) This does not arise in view of reply to (*a*) But 131 villages have been electrified under Karnataka Electricity Board programme upto end of March 1978.

(*c*) Nil

(*d*) Does not arise in view of reply to (*c*) above.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ನನ್ನ ಪ್ರಶ್ನೆ ಬಗ್ಗೆರಲ್ಲಿ ಏನೇನು ಪ್ರಶ್ನೆಗಳನ್ನು ನಾನು ಕೇಳಿದ್ದೇನೆ ಅದಕ್ಕೆ ಸಮಂಜಸವಾದ ಉತ್ತರ ಬಂದಿಲ್ಲ. ನನ್ನ (ಸಿ) ಪ್ರಶ್ನೆಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದಾರೆ. ಅರಕಲಗೂಡು ತಾಲ್ಲೂಕಿನಲ್ಲಿ ಯಾವ ಯಾವ ಊರುಗಳಲ್ಲಿ ಕಂಬ ನೆಟ್ಟು ಆಗಿದೆ ಆ ಊರುಗಳಿಗೆ ವೈರ್ ಎಳೆದು ಎಲೆಕ್ಟ್ರಿಸಿಟಿಯನ್ನು ಕೊಡದೆ ಇರತಕ್ಕಂಥಾದ್ದು ಸುಮಾರು ೫-೬ ವರ್ಷಗಳಿಂದ ಹಾಗೆ ಇದೆ. ಅಲ್ಲಿ ಕಂಬಗಳನ್ನು ನೆಟ್ಟಿದ್ದಾರೆ, ಆದರೆ ಮಾನ್ಯಮಂತ್ರಿಯವರು ಉತ್ತರದಲ್ಲಿ ಕಂಬಗಳನ್ನು ನೆಟ್ಟಿಲ್ಲ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದ ವಿಷಯವಲ್ಲವೇ ಎಂದು ಕೇಳುತ್ತಿದ್ದೇನೆ.

†ಶ್ರೀ ಕೆ.ಹೆಚ್. ಶ್ರೀನಿವಾಸ್.—ನನ್ನ ಹತ್ತಿರ ಇರತಕ್ಕಂಥ ವರದಿ ಪ್ರಕಾರ ಅಂತಹ ಸಂದರ್ಭಗಳು ಆರಕಲಗೂಡು ತಾಲ್ಲೂಕಿನಲ್ಲಿ ಇಲ್ಲ. ಹಾಗೇನಾದರೂ ಅಂತಹ ಸಂದರ್ಭಗಳು ಇದೆ ಎಂದು ಹೇಳಿದರೆ, ಆ ಹಳ್ಳಿಗಳ ಬಗ್ಗೆ ಮಾಹಿತಿಯನ್ನು ಕೊಟ್ಟರೆ ತಕ್ಷಣ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಮಾಹಿತಿ ಕೊಡತಕ್ಕಂಥ ವಿಷಯ ಬೇರೆ. ಈ ಸದನದಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಅಪೇಕ್ಷೆಮಾಡಿ ಪ್ರಶ್ನೆಗಳನ್ನು ಕೇಳಿದಾಗ ಈ ರೀತಿ ಹೇಳಿದರೆ ಹೇಗೆ? ಪಾಸ್ತಪಾಂತಕ್ಕೆ ದೂರವಾಗಿರತಕ್ಕಂಥ ವರದಿಯನ್ನು ತಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ. ಹಾಗೆ ಪಾಸ್ತಪಾಂತಕ್ಕೆ ದೂರವಾಗಿರತಕ್ಕಂಥ ವರದಿಯನ್ನು ಸಲ್ಲಿಸಿರುವ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ಹಾಗೇನಾದರೂ ಇದ್ದರೆ ಅಂತಹವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಈ ಆರ್. ಇ. ಸಿ, ಪ್ರೋಗ್ರಾಮ್‌ನಲ್ಲಿ ಆರಕಲಗೂಡು ತಾಲ್ಲೂಕನ್ನು ಸೇರಿಸಿದ್ದೀರಾ ಎಂದು ಕೇಳಿರುವುದಕ್ಕೆ ಇಲ್ಲ ಎಂದು ತಾವು ಉತ್ತರ ಕೊಟ್ಟಿದ್ದೀರಿ. ಈ ಆರ್, ಇ. ಸಿ ಪ್ರೊಗ್ರಾಮ್‌ನಲ್ಲಿ ಈ ಆರಕಲಗೂಡು ತಾಲ್ಲೂಕನ್ನು ಸೇರ್ಪಡೆ ಮಾಡುವುದಕ್ಕೆ ಆರ್ಹತೆಗಳು ಏನೇನು ಇರಬೇಕು? ಅಂತಹ ಆರ್ಹತೆಗಳ ಆಧಾರದ ಮೇಲೆ ಆಯಾ ತಾಲ್ಲೂಕುಗಳನ್ನು ಸೇರ್ಪಡೆ ಮಾಡಬೇಕೆಂದು ಏನಾದರೂ ನಿರ್ಣಯ ಮಾಡಿದ್ದೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಬಗ್ಗೆ ರೂರಲ್ ಎಲೆಕ್ಟ್ರಿಕ್ ಕಾರ್ಪೊರೇಷನ್ ಆಫ್ ಇಂಡಿಯಾ ದವರು ಕೆಲವೊಂದು ಸ್ಕೀಮ್‌ಗಳನ್ನು ತಯಾರಿಸಿದ್ದಾರೆ. ಆ ಸ್ಕೀಮ್ ಪ್ರಕಾರ ನಾವು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಅವರು ಒಂದು ಕ್ರಿಟೇರಿಯಾ ಇಟ್ಟುಕೊಂಡು ಅದನ್ನು ಮಾಡುತ್ತಾರೆ. ಆದರಲ್ಲಿ ನಮ್ಮ ರಾಜ್ಯದ್ದನ್ನೂ ಸೇರಿಸಬೇಕಾದರೆ ಬಂದಿರತಕ್ಕಂಥ ಅರ್ಜಿಗಳು ಮತ್ತು ಸಂದರ್ಭಗಳನ್ನು ತಿಳಿದು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಒಂದು ಸ್ಕೀಮ್ ತಯಾರು ಮಾಡಿ, ಬೋರ್ಡ್ ಮುಂದೆ ಇಟ್ಟು ಶಿಫಾರಸ್ಸು ಮಾಡಿ ರೂರಲ್ ಎಲೆಕ್ಟ್ರಿಕ್ ಕಾರ್ಪೊರೇಷನ್ ಆಫ್ ಇಂಡಿಯಾಗೆ ಕಳಿಸಿಕೊಡುತ್ತಾರೆ. ಈ ಬಗ್ಗೆ ವಿವರವಾದ ಕ್ರಿಟೇರಿಯಾ ಬೇಕು ಎಂದರೆ ಇನ್ನೊಂದು ಪ್ರಶ್ನೆ ಕೇಳಿದರೆ ನಾನು ವಿವರ ಒದಗಿಸಿ ಕೊಡುತ್ತೇನೆ.

SRI H. D. DEVE GOWDA.—Sir, the question is specific and the supplementary arises out of the main question, I want to know the criteria that is adopted by the Government to include a particular Taluk in the R.E.C. programme?

SRI K. H. SRINIVASA.—The question is whether Arkalgud Taluk has been included, and the answer to that is 'it has not been included' If the hon. member wants to know the specific criteria I will certainly be happy to furnish it provided another notice is given. The information is not available with me just now, and I cannot say it off handed.

ಶ್ರೀ ಹೆಚ್. ಡಿ. ದೇವೇಗೌಡ.— ಆರ್. ಇ. ಸಿ, ಪ್ರೋಗ್ರಾಮ್‌ನಲ್ಲಿ ಯಾವುದೇ ಒಂದು ನಿರ್ದಿಷ್ಟ ತಾಲ್ಲೂಕನ್ನು ಸೇರ್ಪಡೆ ಮಾಡುವುದಕ್ಕೆ ಇರುವ ಕ್ರಿಟೇರಿಯಾವನ್ನು ಈ ಸಭೆಗೆ ಒದಗಿಸುವುದು ಕಷ್ಟ ಎಂದು ಮಾನ್ಯ ಮಂತ್ರಿಯವರು, ಹೇಳುತ್ತಿದ್ದಾರೆ; ಅದನ್ನು ನಾವು ಒಪ್ಪಿಕೊಳ್ಳೋಣ. ಆದರೆ ಆದರ ಉದ್ದೇಶ ಏನೆಂದರೆ ಈಗ ರಾಜ್ಯಸರ್ಕಾರದವರು ಆರ್. ಇ. ಸಿ. ಪ್ರೋಗ್ರಾಮ್‌ನಲ್ಲಿ ಯಾವುದೋ ಒಂದು ನಿರ್ದಿಷ್ಟ ತಾಲ್ಲೂಕನ್ನು ಸೇರ್ಪಡೆ ಮಾಡಬೇಕು ಎಂದು ಶಿಫಾರಸು ಮಾಡುವಾಗ ಅಥವಾ ಈ ಬಗ್ಗೆ ವಿದ್ಯುಚ್ಛಕ್ತಿ ಮಂಡಲಿಯವರು ಶಿಫಾರಸು ಮಾಡುವಾಗ ಅವರು ಕೆಲವೊಂದು ನಿಯಮಾವಳಿಗಳನ್ನು

†Indicate that remarks or speeches have not been revised by the member concerned.

ಅನುಸರಿಸಬೇಕೆಂದು ಹೇಳಿದ್ದಾರೆ. ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ ನಿಯಮ ಅನ್ವಯ ಮಾಡಿ ಶಿಫಾರಸು ಮಾಡಿದ್ದಾರಾ ಅಥವಾ ರಾಜಕೀಯ ಒತ್ತಡಕ್ಕೆ ಸಂಬಂಧಪಟ್ಟಂತೆ ನಿರ್ಣಯ ಮಾಡಿದ್ದಾರೆ ಎಂದು ನೋಡುವಾಗ ಈ ಒಂದು ಕ್ರಿಟೇರಿಯಾ ಬೇಕಾಗುತ್ತದೆ. ಕ್ರಿಟೇರಿಯಾ ಏತಕ್ಕೆ ಬೇಕಾಗುತ್ತದೆ. ಎಂದರೆ. If the criteria has not been followed and if the recommendation of the State Government or the Electricity Board is only on political considerations, then the House has to draw its own conclusions. I want to know the criteria that is adopted and whether Arkalgud taluk is going to fit in that criteria or not?

ಅಧ್ಯಕ್ಷರು.—ತಾವು ಕ್ರಿಟೇರಿಯಾ ಏನಿದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಮಾನ್ಯಮಂತ್ರಿಯವರು ನಿರ್ದಿಷ್ಟವಾಗಿ ಆ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ನಾನು ಹೇಳುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು ಪ್ರತ್ಯೇಕ ಪ್ರಶ್ನೆ ಹಾಕಿದರೆ ಮಾನ್ಯಮಂತ್ರಿಯವರು ಉತ್ತರ ಕೊಡುತ್ತಾರೆ ಅಥವಾ ಅವರಿಗೆ ಈ ಬಗ್ಗೆ ಪತ್ರ ಬರೆದರೆ ಅವರು ಅದನ್ನು ಹೇಳುತ್ತಾರೆ.

ಶ್ರೀ ಕೆ: ಬಿ. ಮಲ್ಲಪ್ಪ.—ಕೆಲವು ಅರ್ಜಿಗಳು ಬಂದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ ಅದರೆ ನಮ್ಮ ತಾಲ್ಲೂಕಿನಲ್ಲಿ ಮುಮ್ಮೂರು, ಜಕ್ಕೂರು ಹಾಗೂ ಇಬ್ಬಡಿಗಳಿಂಧ ಅರ್ಜಿಬಂದಿದೆ. ಎಸ್ಟಿಮೇಟ್ ಕೂಡ ಆಗಿದ್ದು, ಅದು ಮಂಜೂರಾತಿ ಘಟ್ಟದಲ್ಲಿ ಇದೆ. ಮಾನ್ಯ ಮಂತ್ರಿಗಳು ಹೇಳಿದ್ದು ಸುಳ್ಳೋ ನಿಜವೋ?

ಶ್ರೀ ಕೆ. ಹೆಚ್ ಶ್ರೀನಿವಾಸ.—ಮಂಜೂರಾತಿ ಘಟ್ಟದಲ್ಲಿದ್ದರೆ ಅದನ್ನು ಅರ್ಜಿ ಸ್ಟೇಜ್ ಎಂದು ಪರ್ಯಾಲೋಚನೆ ಮಾಡುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ —ಗ್ರಾಮಾಂತರ ವಿದ್ಯುತ್ ಸರಬರಾಜಿಗೆ ಸಂಬಂಧಪಟ್ಟಂತೆ ನಿಮ್ಮಲ್ಲಿ ಜಿಲ್ಲಾವಾರು ಅಂಕಿಅಂಶಗಳು ಇದೆಯೆ? ಒಂದು ವೇಳೆ ಅರಕಲುಗೂಡು ತಾಲ್ಲೂಕು if it is far behind the progress achieved than the Taluks in other districts, will the Government give special consideration to cope up with the shortfall?

ಶ್ರೀ ಕೆ. ಹೆಚ್ ಶ್ರೀನಿವಾಸ.—ಗ್ರಾಮಾಂತರ ವಿದ್ಯುತ್ ಸರಬರಾಜಿಗೆ ಸಂಬಂಧ ಪಟ್ಟಂತೆ ಮಾಹಿತಿ ಕೊಡುವುದಕ್ಕೆ ಆಗುವುದಿಲ್ಲ. ಈ ಯೋಜನೆಯಲ್ಲಿ ಅನೇಕ ಸ್ಕೀಮ್‌ಗಳು ಇವೆ. ಆದರಲ್ಲಿ ಒಂದೊಂದು ಫೀಸಿಬಲ್ ಆಗಬಹುದು. ಫೀಸಿಬಲ್ ಆಗದೇ ಇರಬಹುದು ಆದರೆ ಎಲ್ಲವನ್ನೂ ಕೂಡ ಸರ್ವೆ ಮಾಡುತ್ತಾರೆ. This will have to be sanctioned by the Rural Electric Corporation of India. I will certainly ask the K,E.B. authorities to find out if certain schemes are feasible in Arkalgud Taluk, and if that can be done it will certainly be done. I cannot off-hand say whether we can give priority to that.

ಶ್ರೀ ಹೆಚ್. ಡಿ. ದೇವೆಗೌಡ.—ಸರ್ಕಾರದ ಉದ್ದೇಶ ಏಂದು ಹೇಳುವ ಮಾತಲ್ಲ ಕೆಲವು ಕಾರಣಗಳಿಂದ ಕೆಲವು ಜಿಲ್ಲೆಗಳು ಬಹಳ ಹಿಂದೆ ಉಳಿದಿವೆ. ಅಂಥ ಏರಿಯಾಗಳ ಪಟ್ಟಿಯನ್ನು ತರಿಸಿ ಅಂಥ ಏರಿಯಾಗಳಲ್ಲಿ ಕೆಲಸ ತೆಗೆದುಕೊಳ್ಳಿ ಎಂದು ಸ್ಪೆಷಲ್ ಇನ್‌ಸ್ಟ್ರಕ್ಷನ್ ಕೊಡುತ್ತೀರಾ?

ಶ್ರೀ ಕೆ. ಹೆಚ್. ಶ್ರೀನಿವಾಸ.—ಈಗ ನಾವು ಅನುಸರಿಸತಕ್ಕ ನೀತಿ ಅದೇ ಆಗಿರುವುದರಿಂದ ವಿಶೇಷ ಸೂಚನೆ ಕೊಡತಕ್ಕ ಅವಶ್ಯಕತೆ ಇಲ್ಲ.

SRI H.D. DEVE GOWDA—ಸ್ವಾಮಿ, ಕೆಲವು ಲ್ಯಾಪ್ಸ್ ಆಗಿವೆ I am going to give all documentary evidence to advance my arguments.

SRI K.H. SRINIVAS—If lapses are brought to my notice by the hon. Member, certainly I will take action to initiate correetive measures.